

Hosadigantha Pg. 03



ರೈತರಿಂದ ಸಕಾರಾತ್ಮಕ ಪ್ರತಿಕ್ರಿಯೆ: ಮುಖ್ಯಮಂತ್ರಿ ಬೊಮ್ಮಾಯಿ

ನೈಸರ್ಗಿಕ ಕೃಷಿಗೆ ಆದ್ಯತೆ

ಬೆಂಗಳೂರು: ನೈಸರ್ಗಿಕ ಕೃಷಿ ದೀರ್ಘ ಕಾಲಿಕ ಯೋಜನೆಯಾಗಿದ್ದು, ಈ ಕುರಿತು ಸಂಶೋಧನೆ ಹಾಗೂ ಪ್ರಮಾಣೀಕರಣ ಆತ್ಯಂತ ಪ್ರಮುಖ ಅಂಶಗಳು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಗೃಹಕಚೇರಿ ಕೃಷ್ಣಾದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ಯವರ ರೈತರ ಆದಾಯ ದ್ವಿಗುಣಗೊಳಿಸುವ ಆಶಯದಂತೆ ಕರ್ನಾಟಕ ರಾಜ್ಯ ಮಹಾರಾಷ್ಟ್ರ ಹಾಗೂ ಗುಜರಾತ್ ರಾಜ್ಯಗಳೊಂದಿಗೆ ನೈಸರ್ಗಿಕ ಕೃಷಿಯನ್ನು ಸಕ್ರಿಯವಾಗಿ ಕೈಗೊಂಡಿದೆ. ರಾಜ್ಯದಲ್ಲಿ 5 ಕೃಷಿ ಹಾಗೂ ತೋಟಗಾರಿಕಾ ವಿವಿಗಳಿದ್ದು, ಅವುಗಳ ನಿರಂತರ ಮೇಲ್ವಿಚಾರಣೆಯಲ್ಲಿ ನೈಸರ್ಗಿಕ ಕೃಷಿಯನ್ನು ತಲಾ ಒಂದು ಸಾವಿರ ಎಕರೆ ಪ್ರದೇಶದಲ್ಲಿ ಕೈಗೊಳ್ಳಲಾಗಿದೆ ಎಂದು ವಿವರಿಸಿದರು.

ನೈಸರ್ಗಿಕ ಕೃಷಿಯಲ್ಲಿ ವೈಜ್ಞಾನಿಕ ಅಂಶಗಳನ್ನೂ ಗಮನದಲ್ಲಿಟ್ಟುಕೊಂಡು ಮಣ್ಣಿನ ಫಲವತ್ತತೆ ಕಾಯ್ದುಕೊಳ್ಳಲು ಒತ್ತು ನೀಡಲಾಗಿದೆ. ಮಣ್ಣಿನಲ್ಲಿ ಸಾರಜನಕ ಹಾಗೂ ಕಾರ್ಬನ್ ಪ್ರಮಾಣ ಸೇರಿದಂತೆ ನೈಸರ್ಗಿಕ ಗೊಬ್ಬರ ಬಳಕೆಗೂ ಮಹತ್ವ ನೀಡಲಾಗಿದೆ. ಪೈಟೋಸ್ಯೆನಾಸಿಸ್ ಪರಿಣಾಮದ ಬಗ್ಗೆ ಅಧ್ಯಯನ ಕೈಗೊಳ್ಳಲಾಗಿದೆ. ಈ ಕುರಿತ ಅಧ್ಯಯನಗಳು ಉತ್ತಮ ಇಳುವರಿ ಹಾಗೂ ಉತ್ಪಾದನೆಗೆ ಅವಕಾಶ ಮಾಡಿಕೊಡುತ್ತವೆ. ರೈತರು ಕೂಡ ಸಕಾರಾತ್ಮಕವಾಗಿ ಪ್ರತಿಕ್ರಿಯೆ ನೀಡಿದ್ದಾರೆ ಎಂದು ತಿಳಿಸಿದರು.

ಕೃಷಿ ಕ್ಷೇತ್ರದಲ್ಲಿ ನ್ಯಾನೋ ಯೂರಿಯಾ ಕ್ರಾಂತಿಯನ್ನುಂಟು ಮಾಡಿದ್ದು, ಮೊದಲ ನ್ಯಾನೋ ಯೂರಿಯಾ ಘಟಕ ಬೆಂಗಳೂರಿನಲ್ಲಿದೆ. ಅಧ್ಯಯನ ಮಾಡಿ ರೈತರಿಗೂ ಪರಿಚಯಿಸಲಾಗಿದೆ. ಮುಂದಿನ ದಿನಗಳಲ್ಲಿ ರಾಷ್ಟ್ರಮಟ್ಟದಲ್ಲಿ ಉತ್ತಮ ಪ್ರತಿಕ್ರಿಯೆ, ಬೆಂಬಲ ಸಿಗಲಿದೆ.

■ ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ರೈತರಿಂದಲೇ ಸಮೀಕ್ಷೆ

ಡಿಜಿಟಲ್ ತಂತ್ರಜ್ಞಾನದ ಮೂಲಕ ರೈತರೇ ತಮ್ಮ ಭೂಮಿಯ ಸಮೀಕ್ಷೆ ಮಾಡುತ್ತಿದ್ದು, ಈವರೆಗೆ 212 ಕೋಟಿ ಭೂ ಪ್ರದೇಶವನ್ನು ಡಿಜಿಟಲೀಕರಿಸಲಾಗಿದೆ. ಬೆಳೆ ಸಮೀಕ್ಷೆಯನ್ನೂ ರೈತರೇ ಮಾಡಿದ್ದಾರೆ. 212 ಕೋಟಿ ಪೈಕಿ 16,584 ಬೆಳೆಗಳನ್ನು ರೈತರೇ ಸಮೀಕ್ಷೆ ಮಾಡಿದ್ದರೆ, 1.61ಕೋಟಿ ಪ್ರದೇಶವನ್ನು ಇಲಾಖೆ ಮಾಡಿದೆ. ಯಾವುದೇ ವ್ಯಾಜ್ಯಕ್ಕೆ ಎಡೆ ಮಾಡಿಕೊಡದಿರಲು ಶೇ.100 ರಷ್ಟು ರೈತರೇ ಸಮೀಕ್ಷೆ ಮಾಡಲು ಕ್ರಮ ವಹಿಸಲಾಗುತ್ತಿದೆ. ರೈತರು ಆತ್ಯಂತ ಪ್ರಾಮಾಣಿಕವಾಗಿ ಇದನ್ನು ನಡೆಸಿದ್ದಾರೆ ಎಂದು ಸಿಎಂ ಬಸವರಾಜ ಬೊಮ್ಮಾಯಿ ತಿಳಿಸಿದರು.

ಆನೆ ಮರಿ ಆರೋಗ್ಯದ ಬಗ್ಗೆ ನಿರಂತರ ನಿಗಾ

ಬೆಂಗಳೂರು: ನಾಗರಹೊಳೆ ಅರಣ್ಯದಲ್ಲಿ ಆನೆ ಮರಿಯ ಬಾಲ ಹಾಗೂ ಸೊಂಡಿಲಲ್ಲಿ ಗಾಯವಾಗಿರುವ ಬಗ್ಗೆ ರಾಹುಲ್ ಗಾಂಧಿ ಪತ್ರ ಬರೆದಿದ್ದು, ಈ ಬಗ್ಗೆ ಸ್ಪಂದಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು. ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ನಾಗರಹೊಳೆ ಅರಣ್ಯಕ್ಕೆ ರಾಹುಲ್ ಗಾಂಧಿ ಭೇಟಿ ನೀಡಿದಾಗ ಇದನ್ನು ಗಮನಿಸಿದ್ದಾರೆ. ಹಿರಿಯ ಅಧಿಕಾರಿಗಳ ಬಳಿ ಮಾತನಾಡಿ ಆನೆಗಳಿಗೆ ಏನೆಲ್ಲ ಚಿಕಿತ್ಸೆ ನೀಡಬಹುದೆಂದು ಪರಿಶೀಲನೆ ಮಾಡಲಾಗುವುದು. ಈ ಕುರಿತು ಸ್ಪಂದಿಸಲಾಗುತ್ತದೆ ಹಾಗೂ ಮಾನವೀಯ ದೃಷ್ಟಿಯಿಂದಲೂ ಆದರ ಅಗತ್ಯವಿದೆ ಎಂದರು.

ರಾಹುಲ್‌ಗೆ ಸಿಎಂ ಪತ್ರ: ಮರಿ ಆನೆಯ ಮೇಲೆ ಕಾಡು ಪ್ರಾಣಿಗಳು ದಾಳಿ ಮಾಡಿರುವುದು ಗಮನಕ್ಕೆ ಬಂದಿದೆ. ಮರಿ ಆನೆಯನ್ನು ತಾಯಿಯಿಂದ ಬೇರ್ಪಡಿಸಿದರೆ, ಚಿಕಿತ್ಸೆಗೆ ಸಹಕರಿಸದೇ ಸಮಸ್ಯೆ ಉಲ್ಬಣವಾಗುವ ಸಾಧ್ಯತೆ ಯನ್ನು ತಜ್ಞರು ತಿಳಿಸಿದ್ದಾರೆ. ಸದ್ಯ ಆನೆ ಮರಿಗೆ ಔಷಧೋಪಚಾರ ನೀಡಲಾಗಿದೆ ಎಂದು ಸಿಎಂ ಪತ್ರದಲ್ಲಿ ತಿಳಿಸಿದ್ದಾರೆ.

ಭಾರತದ ಬಿಳಿ ಬಂಗಾರಕ್ಕೆ ಹೆಚ್ಚಿದ ಬೇಡಿಕೆ

ಇಂದು ವಿಶ್ವ ಹತ್ತಿ ದಿನ

ಪ್ರತಿ ವರ್ಷದ ಅ.7ರಂದು ವಿಶ್ವಹತ್ತಿ ದಿನವನ್ನು ಆಚರಿಸಲಾಗುತ್ತದೆ. ಹತ್ತಿ ಉತ್ಪಾದನೆಯ ಮಹತ್ವ, ಉತ್ಪನ್ನಗಳ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ವಿಶ್ವಸಂಸ್ಥೆ 2009ರಿಂದ ವಿಶ್ವಹತ್ತಿ ದಿನ ಎಂದು ಘೋಷಿಸಿದೆ. 'ಹತ್ತಿಗಾಗಿ ಉತ್ತಮ ಭವಿಷ್ಯವನ್ನು ನೇಯೋಣ' ಎನ್ನುವ ಧೀಂಗಡಿ 2022ರ ವಿಶ್ವಹತ್ತಿ ದಿನವನ್ನು ಆಚರಿಸಲಾಗುತ್ತಿದೆ.

ವಿಶ್ವದ ಹತ್ತಿ ಉತ್ಪಾದನೆಯಲ್ಲಿ ಶೇ.25ರಷ್ಟು ಭಾರತದ ಪಾಲು | 2022-23ಕ್ಕೆ ಮತ್ತಷ್ಟು ಏರಿಕೆಯಾಗುವ ನಿರೀಕ್ಷೆ

ವಿಕ ಫೋಕಸ್

- ನಾಗರಾಜು ಅಶ್ವತ್ಥ್ ಬೆಂಗಳೂರು ಗ್ರಾಮಾಂತರ

nagaraju.a@timesgroup.com

ಜವಳಿ ಕ್ಷೇತ್ರವನ್ನೇ ಬಲವಾಗಿ ನಂಬಿಕೊಂಡಿದ್ದ ಪಾಕಿಸ್ತಾನದಲ್ಲಿ ಈಗ ಹತ್ತಿ ಆಭಾವ ಉಂಟಾಗಿದೆ. ಕಳೆದ ತಿಂಗಳು ಉಂಟಾಗಿದ್ದ ಪ್ರವಾಹದಿಂದ ದೇಶದಲ್ಲಿನ ಬಹುತೇಕ ಹತ್ತಿ ಬೆಳೆ ನಾಶವಾಗಿದೆ. ಹೀಗಾಗಿ ಅಲ್ಲಿ ಈಗ ಹತ್ತಿಗೆ ಎಲ್ಲಿಲ್ಲದ ಬೇಡಿಕೆ ಬಂದಿದೆ. ಹತ್ತಿ ಕೊರತೆಯಿಂದಾಗಿ ಪಾಕಿಸ್ತಾನದ ಜವಳಿ ಉತ್ಪಾದಕರು ಉತ್ಪಾದನೆ ಸ್ಥಗಿತಗೊಳಿಸಿದ್ದಾರೆ. ಜತೆಗೆ ಉಕ್ರೇನ್ -ರಷ್ಯಾ ಸಂಘರ್ಷ ಕೂಡ ಹತ್ತಿ ಮಾರುಕಟ್ಟೆ ಮೇಲೆ ಪರಿಣಾಮ ಬೀರಿದೆ. ಹೀಗಾಗಿ ಭಾರತದ ಹತ್ತಿಗೆ ಬಂಪರ್ ಬೇಡಿಕೆ ಬರುವುದು ನಿಚ್ಚಳವಾಗಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಹತ್ತಿ ಉತ್ಪಾದನೆಯಲ್ಲಿ ಭಾರತ ಆಗ್ರಸ್ಥಾನದಲ್ಲಿದೆ. ಹತ್ತಿ ಪೂರೈಕೆಗೆ ಮೊದಲ ಆದ್ಯತೆ ನೀಡುತ್ತಿರುವ ಕೇಂದ್ರ ಜವಳಿ ಸಚಿವಾಲಯ ಕಳೆದ ವರ್ಷದಲ್ಲಿ 338 ಲಕ್ಷ ಬೇಲ್ (5.75 ಮಿಲಿಯನ್ ಮೆಟ್ರಿಕ್ ಟನ್) ಹತ್ತಿ ಬೇಡಿಕೆಯನ್ನು ನೀಗಿಸಿದೆ. ಹತ್ತಿ ಉತ್ಪಾದನೆಯಾಗುವ ರಾಜ್ಯಗಳನ್ನು 3 ವಲಯಗಳಾಗಿ ವಿಂಗಡಿಸಲಾಗಿದೆ. ಉತ್ತರ ವಲಯದಿಂದ ಪಂಜಾಬ್, ಹರಿಯಾಣ ಮತ್ತು ರಾಜಸ್ಥಾನಗಳಿದ್ದು ಮಧ್ಯ ವಲಯದಲ್ಲಿ ಗುಜರಾತ್, ಮಹಾರಾಷ್ಟ್ರ ಮಧ್ಯಪ್ರದೇಶಗಳಿವೆ. ಉಳಿದಂತೆ ದಕ್ಷಿಣ ವಲಯದಿಂದ ಕರ್ನಾಟಕ, ತೆಲಂಗಾಣ, ಆಂಧ್ರ ಮತ್ತು ತಮಿಳುನಾಡು ಸ್ಥಾನ ಪಡೆದಿವೆ.

ವಿಶ್ವಮಟ್ಟದಲ್ಲಿ ಹತ್ತಿಗೆ ಬೇಡಿಕೆ ಹೆಚ್ಚಿದ್ದರೂ, ಸ್ಥಳೀಯವಾಗಿ ರೈತರು ಮತ್ತು ವರ್ತಕರಿಗೆ ಬಾಧ ಸಿಗದಂತಾಗಿದೆ. ಹೀಗಾಗಿ, ಕೇಂದ್ರ ಸರಕಾರ ರೈತರ ಮತ್ತು ಪ್ರಾದೇಶಿಕ ವರ್ತಕರ ಹಿತ ಕಾಯಲು ನೀತಿಯೊಂದನ್ನು ರೂಪಿಸಬೇಕಿದೆ.

- ಡಾ.ಬಿ. ಮೌಲಾಲಿ ಗಂಗಮಳ
ಬಳ್ಳಾರಿ ಜಿಲ್ಲಾ ಕಾಟನ್ ಅಡೋಸಿಯೇಶನ್



ದೇಶದಲ್ಲಿ ಹತ್ತಿ ಬೇಡಿಕೆ ಮತ್ತು ಪೂರೈಕೆ

ವರ್ಷ	ವಿಸ್ತೀರ್ಣ (ಲಕ್ಷ ಹೆಕ್ಟೇರ್)	ಇಳುವರಿ (ಕೆಜಿ/ಹೆಕ್ಟೇರ್)
2018-19	126.14	449
2019-20	134.77	460
2020-21	130.07	462
2021-22	120.69	510

ಹೆಚ್ಚು ಹತ್ತಿ ಉತ್ಪಾದಿಸುವ ದೇಶಗಳು

2021-22	ಭಾರತ	ಆಮೆರಿಕ	ಚೀನಾ	ಪಾಕಿಸ್ತಾನ	ಬ್ರೆಜಿಲ್
ವಿಸ್ತೀರ್ಣ	12.069	4035	3028	2110	1547
ಉತ್ಪಾದನೆ	6.16	5.73	3.84	0.98	2.71

(ಮಿಲಿಯನ್ ಮೆಟ್ರಿಕ್ ಟನ್)

ಎಲ್ಲಿ ಎಷ್ಟು ಬಳಕೆ ? (ಮಿಲಿಯನ್ ಮೆಟ್ರಿಕ್ ಟನ್)

ದೇಶ	2018-19	2019-20	2020-21	2021-22
ಚೀನಾ	8.25	7.23	8.40	8.20
ಭಾರತ	5.29	4.58	5.70	5.75
ಪಾಕಿಸ್ತಾನ	2.36	1.98	2.15	2.15
ಬ್ರೆಜಿಲ್	0.73	0.57	0.69	0.70
ಆಮೆರಿಕ	0.63	0.47	0.52	0.56

- ಗುಜರಾತ್‌ನಲ್ಲಿ ನೀಡಿದಂತೆ ತೆರಿಗೆ ವಿನಾಯಿತಿಯನ್ನು ರಾಜ್ಯದ ರೈತರಿಗೂ ನೀಡಬೇಕಿದೆ.
- ಹತ್ತಿಗೆ ವಿಶ್ವಮಾರುಕಟ್ಟೆಯಲ್ಲಿ ಬೇಡಿಕೆಯಿದ್ದರೂ, ಪ್ರಾದೇಶಿಕ ರೈತರು ನಷ್ಟ ಅನುಭವಿಸುತ್ತಿದ್ದಾರೆ.
- ಅತಿವೃಷ್ಟಿ, ಅನಾವೃಷ್ಟಿಯಿಂದಾಗಿ ಹತ್ತಿ ಬೆಳೆ ಅನಿಶ್ಚಿತತೆಗೆ ಸಿಲುಕಿದೆ
- ಸ್ಪಿನ್ನಿಂಗ್ ಮಿಲ್ಲಿಂಗ್‌ಗಳಿಂದ ಕಡಿಮೆ ದರಕ್ಕೆ ಬೇಡಿಕೆ
- ಸ್ಥಳೀಯ ಮಟ್ಟದಲ್ಲಿ ಹತ್ತಿ ಬೆಳೆಗಾರರೊಂದಿಗೆ ಸರಕಾರದ ಸಮನ್ವಯದ ಸಮಿತಿಗಳ ರಚನೆ ಅಗತ್ಯ
- ಹತ್ತಿ ಬೆಳೆಗಾರರಿಗೆ ಮಧ್ಯವರ್ತಿಗಳ ಹಾವಳಿ

ಹೇಗಿದೆ ವ್ಯವಹಾರ?

2022ರ ಜನವರಿಯಲ್ಲಿ ಪ್ರತಿ 356 ಕೆಜಿಗೆ 60 ಸಾವಿರ ರೂ. ಇದ್ದ ದರ ಮೇ ಅಂತ್ಯಕ್ಕೆ 1.10 ಲಕ್ಷಕ್ಕೆ ಏರಿಕೆ ಕಂಡಿದೆ. ಉಕ್ರೇನ್ ಯುದ್ಧ, ಪಾಕಿಸ್ತಾನ ಸೇರಿದಂತೆ ನಾನಾ ಯುದ್ಧಗಳಲ್ಲಾಗುತ್ತಿರುವ ಆರ್ಥಿಕ ಬದಲಾವಣೆಗಳಿಂದಾಗಿ ಹತ್ತಿಗೆ ಬೇಡಿಕೆ ಹೆಚ್ಚಿದ್ದು, ವಿಶ್ವಮಾರುಕಟ್ಟೆಯಲ್ಲಿ ಉತ್ತಮ ಬೆಲೆ ಕಂಡುಕೊಳ್ಳುತ್ತಿದೆ.

ರಾಜ್ಯದ ಪರಿಸ್ಥಿತಿ ಹೇಗಿದೆ ?

ವಿಜಯನಗರ ಜಿಲ್ಲೆಯಲ್ಲಿ 5641 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ಕಳೆದ ಬಾರಿ ಮೇಣಸಿನಕಾಯಿ ಕಾಯಿ ಬೆಳೆ ಬೆಳೆದು ನಷ್ಟವಾಗಿದ್ದ ರೈತರು ಈ ಬಾರಿ ಹೆಚ್ಚಾಗಿ ಹತ್ತಿ ಬಿತ್ತನೆ ಮಾಡಿದ್ದರು. ಜಿಲ್ಲೆಯಲ್ಲಿ 37,132 ಹೆಕ್ಟೇರ್ ಪ್ರದೇಶದಲ್ಲಿ ಹತ್ತಿ ಬಿತ್ತನೆ ಮಾಡಲಾಗಿದೆ. ಉಭಯ ಜಿಲ್ಲೆಗಳಲ್ಲಿ ಸದ್ಯದ ದರ 8 ರಿಂದ 9 ಸಾವಿರ ರೂ.ವರೆಗೆ ಪ್ರತಿ ಕ್ವಿಂಟಾಲ್‌ಗಿದೆ. ರಾಯಚೂರಲ್ಲಿ ಹತ್ತಿ ಬೆಲೆ 8,300 ರಿಂದ 9,200 ರೂಪಾಯಿ ಪ್ರತಿ ಕ್ವಿಂಟಾಲ್‌ಗಿದೆ. ಕಳೆದ ಸಲ ಹತ್ತಿಗೆ ಒಳ್ಳೆಯ ದರ ಬಂದಿದ್ದರಿಂದ ಈ ಸಲವೂ ರೈತರು ಹತ್ತಿ ಬೆಳೆಯಲು ಮುಂದಾಗಿದ್ದಾರೆ. ಕೊಪ್ಪಳ ಜಿಲ್ಲೆಯಲ್ಲಿ ಈ ಬಾರಿ 9670 ಹೆಕ್ಟೇರ್‌ನಲ್ಲಿ ಹತ್ತಿ ಬಿತ್ತನೆಯಾಗಿದೆ. ದಾವಣಗೆರೆ ಜಿಲ್ಲೆಯಲ್ಲಿ 7292 ಹೆಕ್ಟೇರ್ ಬಿತ್ತನೆ ಗುರಿಯಿದ್ದು ಇದರಲ್ಲಿ 5990 ಹೆ. ಬಿತ್ತನೆ ಆಗಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ 12,830 ಹೆ. ಗುರಿಯಿದ್ದು ಈ ವರ್ಷ 16,359 ಹೆ. ಬಿತ್ತನೆ ಆಗಿದೆ. ಮೈಸೂರು ಜಿಲ್ಲೆಯಲ್ಲಿ ಎಚ್.ಡಿ. ಕೋಟೆ ಭಾಗದಲ್ಲಿ ಹೆಚ್ಚು ಹತ್ತಿ ಬೆಳೆಯಲಾಗುತ್ತದೆ. ಅತಿಯಾದ ಮಳೆಯಿಂದ ಈ ಬಾರಿ ಇಳುವರಿ ಕುಂಠಿತವಾಗಿದೆ. ಕ್ವಿಂಟಾಲ್‌ಗೆ 5ರಿಂದ 6 ಸಾವಿರ ದರವಿದೆ. 28 ಸಾವಿರ ಹೆಕ್ಟೇರ್‌ನಲ್ಲಿ ಬೆಳೆದರೂ ಬೆಲೆ ಮಾತ್ರ ಸಿಗಲಿಲ್ಲ. ಹಾಸನ ಜಿಲ್ಲೆ ಅರಸೀಕೆರೆ ತಾಲೂಕು ಬಾವಗಲ್ ಭಾಗದ 209 ಹೆಕ್ಟೇರ್‌ನಲ್ಲಿ ಹತ್ತಿ ಬೆಳೆಯಲಾಗುತ್ತದೆ. ಈ ಬಾರಿ ಮಳೆಯಿಂದ ಶೇ.25ರಿಂದ 30ರಷ್ಟು ನಷ್ಟವಾಗಿದೆ.

Vijayakarnataka pg.04

ಕೇಂದ್ರ ಸಚಿವ ಅಮಿತ್ ಶಾ ಜತೆಗಿನ ಸಭೆಯಲ್ಲಿ ಸಿಎಂ ಬೊಮ್ಮಾಯಿ | 78 ಲಕ್ಷ ರೈತರ ಸರ್ವೇ ನಂಬರ್ ಜತೆ ಆಧಾರ್ ಕಾರ್ಡ್ ಜೋಡಣೆ

ಕೃಷಿ ಡಿಜಿಟಲೀಕರಣದಲ್ಲಿ ಕರ್ನಾಟಕ ಮುಂಚೂಣಿ

ಬೆಂಗಳೂರು: ಕೃಷಿ ಕ್ಷೇತ್ರದ ಡಿಜಿಟಲೀಕರಣದಲ್ಲಿ ಕರ್ನಾಟಕ ಮುಂಚೂಣಿಯಲ್ಲಿದ್ದು, ಈವರೆಗೆ 78 ಲಕ್ಷ ರೈತರ ಸರ್ವೇ ನಂಬರ್‌ಗಳನ್ನು ಆಧಾರ್ ಕಾರ್ಡ್‌ಗೆ ಜೋಡಿಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಶಾ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ನೈಸರ್ಗಿಕ ಕೃಷಿ ಮತ್ತು ಡಿಜಿಟಲ್ ಕೃಷಿ ಕುರಿತ ವೀಡಿಯೋ ಸಂವಾದದಲ್ಲಿ ಗೃಹ ಕಚೇರಿ ಕೃಷ್ಣಾದಿಂದ ಪಾಲ್ಗೊಂಡು ಅವರು ಮಾತನಾಡಿದರು. ಈ ವೇಳೆ ಕೃಷಿ ಡಿಜಿಟಲೀಕರಣ ಕ್ಷೇತ್ರದಲ್ಲಿ ಕರ್ನಾಟಕ ಮುಂದಿರುವ ಬಗ್ಗೆ ಕೇಂದ್ರ ಕೃಷಿ ಸಚಿವಾಲಯದ ಕಾರ್ಯದರ್ಶಿ ಮಾಡಿದ ಪ್ರಸ್ತಾಪವನ್ನು ಉಲ್ಲೇಖಿಸಿದ ಅವರು, ಭೂಮಿ ತಂತ್ರಜ್ಞಾನದಡಿ ಈ ಹಿಂದೆಯೇ ಡಿಜಿಟಲೀಕರಣವಾಗಿದೆ. ಭೂಮಿ ಹೊಂದಿರುವ 62 ಲಕ್ಷ ಮತ್ತು ಭೂರಹಿತ 16 ಲಕ್ಷ ರೈತರನ್ನು ತಂತ್ರಾಂಶದಲ್ಲಿ ಸೇರಿಸಲಾಗಿದೆ. ಕೇಂದ್ರ ಸರಕಾರದ ಸ್ವಾಮಿತ್ವ ಯೋಜನೆಯನ್ನು ಕರ್ನಾಟಕದಲ್ಲಿ ಅಭಿಯಾನದ ರೀತಿಯಲ್ಲಿ ಕೈಗೊಳ್ಳಲಾಗಿದೆ ಎಂದರು.

ಕೃಷಿ ಕ್ಷೇತ್ರದಲ್ಲಿ ನ್ಯಾನೋ ಯೂರಿಯಾ ಕ್ರಾಂತಿ ಉಂಟುಮಾಡಿದ್ದು, ಮೊದಲ ನ್ಯಾನೋ ಯೂರಿಯಾ ಘಟಕ ಬೆಂಗಳೂರಿನಲ್ಲಿದೆ. ಅಧ್ಯಯನ ಮಾಡಿ, ರೈತರಿಗೂ ಪರಿಚಯಿಸಲಾಗಿದೆ. ಮುಂದಿನ ದಿನಗಳಲ್ಲಿ ರಾಷ್ಟ್ರಮಟ್ಟದಲ್ಲಿ ಉತ್ತಮ ಪ್ರತಿಕ್ರಿಯೆ ಹಾಗೂ ಬೆಂಬಲ ಸಿಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.



ಇಂದು ಕೇಂದ್ರ ಗೃಹ ಮತ್ತು ಸಹಕಾರ ಸಚಿವರಾದ ಅಮಿತ್ ಶಾ ಅವರ ಅಧ್ಯಕ್ಷತೆಯಲ್ಲಿ ನೈಸರ್ಗಿಕ ಕೃಷಿ ಮತ್ತು ಡಿಜಿಟಲ್ ಕೃಷಿ ಕುರಿತು ನಡೆದ ವಿಡಿಯೊ ಸಂವಾದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ಗೃಹ ಕಚೇರಿ ಕೃಷ್ಣಾದಿಂದ ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ರಾಜ್ಯ ಸರ್ಕಾರದ ಹಿರಿಯ ಅಧಿಕಾರಿಗಳು ಹಾಜರಿದ್ದರು.

ಡಿಜಿಟಲ್ ತಂತ್ರಜ್ಞಾನದ ಮೂಲಕ ರೈತರೇ ತಮ್ಮ ಭೂಮಿಯ ಸಮೀಕ್ಷೆ ಮಾಡುತ್ತಿದ್ದಾರೆ. ಬೆಳೆ ಸಮೀಕ್ಷೆಯನ್ನೂ ರೈತರೇ ಮಾಡುತ್ತಿದ್ದಾರೆ. ಯಾವುದೇ ವ್ಯಾಜ್ಯಕ್ಕೆ ಎಡೆ ಮಾಡಿಕೊಡದಿರಲು ಶೇ. 100ರಷ್ಟು ರೈತರೇ ಸಮೀಕ್ಷೆ ಮಾಡಲು ಕ್ರಮ ವಹಿಸಲಾಗುತ್ತಿದೆ.

ರಾಜ್ಯದಲ್ಲಿ 2.4 ಲಕ್ಷ ಎಕರೆ ಭೂ ಪ್ರದೇಶದಲ್ಲಿ ಕೈಗೊಂಡಿರುವ ಸಾವಯವ ಕೃಷಿ ಭೂಮಿಯನ್ನು ನೈಸರ್ಗಿಕ ಕೃಷಿಗೆ ಕ್ರಮೇಣ ಪರಿವರ್ತಿಸಲಾಗುತ್ತಿದೆ. ಮುಂದಿನ ಮಾರ್ಚ್ ಒಳಗೆ ಹೊಸದಾಗಿ 1 ಲಕ್ಷ ಎಕರೆ ಪ್ರದೇಶವನ್ನು ನೈಸರ್ಗಿಕ ಕೃಷಿಗೆ ಪರಿವರ್ತನೆ ಮಾಡಲು ಗುರಿ ನಿಗದಿ ಪಡಿಸಲಾಗಿದೆ. ನೈಸರ್ಗಿಕ ಕೃಷಿಗೆ 41,434 ಕೃಷಿಕರನ್ನು ಆಯ್ಕೆ ಮಾಡಲಾಗಿದ್ದು, 1,100 ತರಬೇತಿ ಕಾರ್ಯಕ್ರಮಗಳು, 200 ಕ್ಷೇತ್ರ ಭೇಟಿಗಳನ್ನು ಕೈಗೊಳ್ಳಲಾಗಿದೆ. ಒಟ್ಟಾರೆ ಮಿಷನ್ ಮಾದರಿಯಲ್ಲಿ ಕಾರ್ಯಗತಗೊಳಿಸಲಾಗುತ್ತಿದೆ.

-ಬಸವರಾಜ ಬೊಮ್ಮಾಯಿ ಸಿಎಂ

ರೈತರು ಅತ್ಯಂತ ಪ್ರಾಮಾಣಿಕವಾಗಿ ಇದನ್ನು ನಡೆಸಿದ್ದಾರೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ರಾಜ್ಯ ಸರಕಾರದ ಹಿರಿಯ ಅಧಿಕಾರಿಗಳು ಹಾಜರಿದ್ದರು.

ನೈಸರ್ಗಿಕ ಕೃಷಿ ದೀರ್ಘಕಾಲಿಕ ಯೋಜನೆ

ನೈಸರ್ಗಿಕ ಕೃಷಿ ದೀರ್ಘಕಾಲಿಕ ಯೋಜನೆಯಾಗಿದ್ದು, ಈ ಕುರಿತು ಸಂಕೋಧನೆ ಹಾಗೂ ಪ್ರಮಾಣೀಕರಣ ಅತ್ಯಂತ ಪ್ರಮುಖ ಅಂಶಗಳು. ಪ್ರಧಾನಿ ನರೇಂದ್ರ ಮೋದಿಯವರ ರೈತರ ಆದಾಯ ದ್ವಿಗುಣಗೊಳಿಸುವ ಆಶಯದಂತೆ ಕರ್ನಾಟಕವು ಮಹಾರಾಷ್ಟ್ರ ಹಾಗೂ ಗುಜರಾತ್ ರಾಜ್ಯಗಳೊಂದಿಗೆ ನೈಸರ್ಗಿಕ ಕೃಷಿಯನ್ನು ಸಕ್ರಿಯವಾಗಿ ಕೈಗೊಂಡಿದೆ. ರಾಜ್ಯದಲ್ಲಿ 5 ಕೃಷಿ ಹಾಗೂ ತೋಟಗಾರಿಕಾ ವಿಶ್ವವಿದ್ಯಾಲಯಗಳಿದ್ದು, ವಿಶ್ವವಿದ್ಯಾಲಯಗಳ ನಿರಂತರ ಮೇಲ್ವಿಚಾರಣೆಯಲ್ಲಿ ನೈಸರ್ಗಿಕ ಕೃಷಿಯನ್ನು ತಲಾ ಒಂದು ಸಾವಿರ ಎಕರೆ ಪ್ರದೇಶದಲ್ಲಿ ಕೈಗೊಳ್ಳಲಾಗಿದೆ. ಬೆಳೆಗಳ ಗುಣಮಟ್ಟದಿಂದ ಹಿಡಿದು, ಉತ್ಪನ್ನ, ಪರೀಕ್ಷೆಗಳನ್ನು ಕೃಷಿ ಪ್ರಯೋಗಾಲಯದಲ್ಲಿ ಕೈಗೊಳ್ಳಲಾಗಿದೆ ಎಂದು ಸಿಎಂ ಬೊಮ್ಮಾಯಿ ವಿವರಿಸಿದರು.

Vishwavani pg. 02

Deccan herald Pg.01

Details on Page 6

ECO CHOICE

Areca's red byproduct yields a 'green' dye

VARSHA GOWDA
BENGALURU, DHNS

A byproduct of arecanut processing, a dark syrup of a reddish-brown hue called chogaru, has garnered new interest for its potential as a natural dye. New research in the dye's composition, viscosity and dyeing methods has allowed its use even in block printing, apart from colouring yarn and fabric.

This non-forest-based natural dye is inexpensive and eco-friendly. The use of chogaru can benefit thousands of arecanut growers in Karnataka, the top producing state in India. In 2020, the state produced about 77% of the country's share of the crop. About half of the produce in the state, close to 4.3 lakh tonnes, is harvested for red arecanut, the source of chogaru.

Colouring fabrics in hues of brown, garnet, beige and onion pink, the natural dye has the potential to make its mark in the natural dye market which is expected to generate revenues of about $5 billion by 2024 globally, growing at a CAGR of about 11%.

The University of Agricultural Sciences (UAS), Dharwad has been studying chogaru to increase its economic and commercial viability. "To standardise results, the components of the dye were broken down. We studied different thickening and binding agents and this has even presented the possibility of its use in block printing," said Jyothi Vastrad, Professor, Department of Textile and Apparel Designing, UAS.

Artisans like Sufian Khatri are excited. "It performed fantastically. In block printing, it gives a nice chocolate brown. I am open to the avenues this dye opens up," said Khatri.

• Areca, Page 6



Fabric dyed using chogaru, a byproduct of arecanut processing. PHOTO COURTESY: SHREE PADRE

Colour code

To produce red arecanut, unripe, green berry is boiled and dried. The red liquid produced in this process is called chogaru. "It is left out in tanks to dry into a syrupy texture," said Poornaprajna, an arecanut grower from Beluru village in Shivamogga district. It is also used to strengthen fishing nets.

Areca's red byproduct yields...

Areca, from Page 1

Khatri is a 10th-generation ajrakh artisan from Gujarat. He recalls the use of arecanut dyes 50 years ago. "It fell into disuse because of market unavailability," he said.

Work has also been under way to reduce the use of water in the dyeing process. "We have conducted experiments with soft-flow dyeing machines. It gives an even finish to the garment. We also have worked to convert the product into a powder form to increase its shelf life and to make transport easier," said Periasamy S, CEO of the Atal Incubation Centre, Tiruppur.

The dye easily breaks down in landfills after a garment is discarded. "Non-natural dyes usually are toxic to the water and soil. There are studies to prove that the effluents during the dyeing process can be carcinogenic," said Jyothi.

An additional benefit is that the byproduct chogaru requires no additional input costs. It can easily provide an additional source of income to arecanut farmers, explains Shree Padre, a farmer and journalist. "Around one lakh litres of chogaru is produced in the state but it is underutilised," he said.

Charaka, a cooperative weaving society in Shivamogga, uses over 2,500 litres of chogaru to dye natural fabrics. "We pay approximately Rs 100 per litre," says Terence Peter, the administrator of the cooperative society.